**ಕರ್ನಾಟಕ ಸರ್ಕಾರ**

***ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತರೀಕೆರೆ.***

***ಸಿ.ಸಿ.ನಂ.685/2014***

***ಪಿ.ಡಬ್ಲ್ಯೂಃ 15***

***ಸಿ.ಡಬ್ಲ್ಯೂಃ 20***

| | | |
|---|---|---|
| **ಹೆಸರು** | ಃ | ಸಿ.ಕೆ .ಮಹೇಂದ್ರಪ್ಪ |
| **ತಂದೆಯ ಹೆಸರು** | ಃ | ಲೇಟ್ ಕರಿಬಸಪ್ಪ |
| **ವಯಸ್ಸು** | ಃ | ***61 ವರ್ಷ*** |
| **ಉದ್ಯೋಗ** | ಃ | ನಿವೃತ್ತ ಎ ಎಸ್ ಐ |
| **ವಾಸಸ್ಥಳ** | ಃ | ಅಜ್ಜಂಪುರ |

***ದಿನಾಂಕಃ 03-10-2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.***

***ಮುಖ್ಯ ವಿಚಾರಣೆ ಃ ಸ.ಸ.ಅ. ರವರಿಂದ.***

ನಾನು ದಿಃ ***12-08-2011*** ರಿಂದ ***04-01-2015*** ರವರೆಗೆ ಲಕ್ಕವಳ್ಳಿ **ಪೋಲೀಸ್ ಠಾಣೆಯಲ್ಲಿ** ಮುಖ್ಯ ಪೇದೆಯಾಗಿ **ಕರ್ತವ್ಯ** ನಿರ್ವಹಿಸಿರುತ್ತೇನೆ.

ದಿನಾಂಕಃ ***15-03-2014*** ರಂದು ಚಾಸಾ-*21* ರವರ ಜೊತೆ ಬಾವಿಕೆರೆ ಗ್ರಾಮಕ್ಕೆ ಭೇಟಿ ನೀಡಿ ಚಾಸಾ-*3* ರವರು ಕೃತ್ಯ ನಡೆದ ಸ್ಥಳವನ್ನು ತೋರಿಸಿದ್ದು, ಸದರಿ ಸ್ಥಳವು ಅರಸೀಕೆರೆ ಗ್ರಾಮದ ಸರ್ವೆ ನಂ.*7* ಪಿ*2* ರ ಜಮೀನಾಗಿದ್ದು, ಅಲ್ಲಿಗೆ ಪಂಚರಾದ ಚಾಸಾ-*11* ಮತ್ತು *12* ರವರನ್ನು ಕರೆದುಕೊಂಡು ಬಂದು ಸ್ಥಳದಲ್ಲಿ ಮಹಜರ್ ಕ್ರಮ ಜರುಗಿಸಿರುತ್ತೇವೆ. ಸದರಿ ಮಹಜರನ್ನು ಮಧ್ಯಾಹ್ನ *12-00* ರಿಂದ *12-30* ಗಂಟೆಯ ವರೆಗೆ ಜರುಗಿಸಿರುತ್ತೇವೆ. ಮಹಜರ್ ನ್ನು ನಾನೇ ನನ್ನ ಕೈಬರಹದ ಮೂಲಕ ಬರೆದಿರುತ್ತೇನೆ.

ಸಾಕ್ಷಿಗೆ ಒಂದುದಾಖಲಾತಿಯನ್ನು ತೋರಿಸಲಾಗಿದ್ದು, ಅದು ಸ್ಥಳ ಪಂಚನಾಮೆಯಾಗಿದ್ದು, ಸದರಿ ದಾಖಲೆಯನ್ನು ಈಗಾಗಲೇ ನಿಪಿ-*4* ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-*4*(ಎಫ್) ಎಂದು ಗುರುತಿಸಲಾಯಿತು.

***ಪಾಟೀ ಸವಾಲು ಃ 1ನೇ ಆರೋಪಿ ಪರ   ಶ್ರೀ ಎ ಆರ್ ಕೆ   ವಕೀಲರಿಂದ.***

ನಾನು ಘಟನಾ ಸ್ಥಳಕ್ಕೆ ಹೋದಾಗ ನನ್ನ ಜೊತೆ ಚಾಸಾ-21 ಸಹ ಬಂದಿರುತ್ತಾರೆ. ಆ ಸಮಯದಲ್ಲಿ ನಾನಾಗಾಲೀ ಅಥವಾ ನನ್ನ ಮೇಲಾಧಿಕಾರಿಗಳಾಗಲೀ ಸ್ಥಳೀಯ ಪಂಚರನ್ನು ಕರೆಸಿಲ್ಲ ಎಂದರೆ ಸರಿ. ಚಾಸಾ-3 ರವರು ಕೃತ್ಯ ನಡೆದ ಸ್ಥಳವನ್ನು ತೋರಿಸಿದ ಮೇರೆಗೆ ನಾನು ಅದರ ಆಧಾರದ ಮೇರೆಗೆ ಸ್ಥಳ ಪಂಚನಾಮೆ ಕ್ರಮವನ್ನು ಬರದಿರುತ್ತೇನೆ. ನಾನು ನಮ್ಮ  ಠಾಣೆಯಲ್ಲಿ ಪಂಚನಾಮೆ ಬರೆದಿದ್ದೇನೆ, ಕೃತ್ಯ ನಡೆದ  ಸ್ಥಳದಲ್ಲಿ ಬರೆದಿಲ್ಲ  ಎಂದರೆ ಸರಿಯಲ್ಲ.

***ಪಾಟೀ ಸವಾಲು ಃ 2ನೇ ಆರೋಪಿ ಪರ   ಶ್ರೀ ಕೆ ಸಿ   ವಕೀಲರಿಂದ.***

1ನೇ ಆರೋಪಿ ಪರ ವಕೀಲರು ಮಾಡಿರುವ ಪಾಟೀ ಸವಾಲನ್ನು 2ನೇ ಆರೋಪಿ ಪರವಾಗಿ ಅಳವಡಿಸಿಕೊಂಡಿರುತ್ತಾರೆ.

ಮರುವಿಚಾರಣೆ ಇಲ್ಲ

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)***

***ಓ. ಕೇ. ಸ. ಇ. ಎ. ಒ.***

Sd/-

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**

**ಪ್ರ.ದ.ನ್ಯಾ.ದಂ. ರವರು, ತರೀಕೆರೆ.**